Kerala Gazette No. 32 dated 11th August 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

## ಅಧಿಸೂಚನೆ

ನಂಬ್ರ 25263/ಲೆಗ್. ಎಚ್2/2017/ಕಾನೂನು. ತಿರುವನಂತಪುರಂ, *2018 ಫೆಬ್ರವರಿ 12, 1192 ಮಕರ 29/ 1939 ಮಾಘ 23.*

2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

ಕಾನೂನು ಕಾರ್ಯದರ್ಶಿ.

# 2018ರ 2ನೇ ನಂಬ್ರ ಅಧ್ಯಾದೇಶ

# 2018ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ—2017ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧ್ಯಾದೇಶ (2017ರ 39)ವನ್ನು 2017 ಡಿಸೆಂಬರ್ 26ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿರುವುದರಿಂದಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲು ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ ಉಪ-ಖಂಡ (ಎ) ಪ್ರಕಾರ 2017ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧ್ಯಾದೇಶ (2017ರ 39)ದ ಪ್ರಾಬಲ್ಯವು 2018 ಮಾರ್ಚ್ 5ನೇ ದಿನಾಂಕದಂದು ಮುಕ್ತಾಯವಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ನಿಬಂಧನೆಗಳನ್ನು ಜಾರಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗ ಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನ ಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ತಾನು ತುರ್ತುಕ್ರಮ ಕೈಗೊಳ್ಳುವ ಅವಶ್ಯಕ ಸನ್ನಿವೇಶವು ಅಸ್ತಿತ್ವದಲ್ಲಿದೆ ಎಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೇರಳ ಸಹಕಾರಿ ಸಂಘಗಳ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 26ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 1969ರ 21ನೇ ಅಧಿನಿಯಮ.—ಈ ಅಧ್ಯಾದೇಶವು ಅಸ್ತಿತ್ವದಲ್ಲಿರುವ ಕಾಲಾವಧಿಯಲ್ಲಿ, 1969ರ ಕೇರಳ ಸಹಕಾರಿ ಸಂಘಗಳ ಅಧಿನಿಯಮು (1969ರ 21) (ಇನ್ನು ಮುಂದೆ ಪ್ರಧಾನ ಅಧಿನಿಯಮುವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗನುಸಾರವಾಗಿ ಪ್ರಾಬಲ್ಯವಿರುವುದಾಗಿದೆ.

3. 88ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 88ನೇ ವಿಭಾಗದಲ್ಲಿ, (1)ನೇ ಉಪ-ವಿಭಾಗದ (ಎ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎ) ಅಂತಹ ಪ್ರತಿಯೊಂದು ವರ್ಗದ ಸಂಘಗಳ ಸದಸ್ಯರು ತಮ್ಮೊಳಗಿನಿಂದ, ನಿಗದಿಪಡಿಸಬಹುದಾದ ಅಂತಹ ರೀತಿಯಲ್ಲಿ ಚುನಾಯಿಸಿದ, ವೃತ್ತದೊಳಗೆ ಸಂಯೋಜಿಸಲ್ಪಟ್ಟ ವಿವಿಧ ವರ್ಗಗಳನ್ನು ಪ್ರತಿನಿಧಿಸುವ ಏಳು ಸದಸ್ಯರು;".

4. <u>ರದ್ಧತಿ ಮತ್ತು ರಕ್ಷಣೆ.</u>—(1) 2017ರ ಕೇರಳ ಸಹಕಾರಿ ಸಂಘಗಳ (ಎರಡನೇ ತಿದ್ದುಪಡಿ) ಅಧ್ಯಾದೇಶ (2017ರ 39)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿಯೋ ಕೈಗೊಂಡಿರುವುದಾಗಿಯೋ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.